# ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಅಧೀಕ್ಷಕ ಅಭಿಯಂತರರು(ವಿ)
ಕಾ ಮತ್ತು ಪಾ ವೃತ್ತ, ಕೇಶ್ವಾಪೂರ, ಹುಬ್ಬಳ್ಳಿ-23
Tel: 0836-2364144, Fax: 0836-2366184

**Superintending Engineer(Ele)**
**O & M Circle, Keshwapur, Hubballi-23**
**E-mail ID: seehbl.hescom@gmail.com**

Corporate Identity Number (CIN) : U31401KA2002SGC030437


ಕ್ರ.ಸಂ: ಅಇಂ(ವಿ)/ಉಲೆನಿ/ಹಿಸ-1/2021-22/ C48-309 ದಿನಾಂಕ: 29 JUL 2021

## ಪ್ರಕಟಣೆ [Notification]

**"ಮೈಕ್ರೋ ಫೀಡರ್ ಫ್ರಾಂಚೈಸಿ" ರವರನ್ನು ನೇಮಕ ಮಾಡಿಕೊಳ್ಳುವುದು.**

***************

ಕಾರ್ಯ ಮತ್ತು ಪಾಲನಾ ವೃತ್ತ, ಹುವಿಸಕಂನಿ., ಹುಬ್ಬಳ್ಳಿ ವ್ಯಾಪ್ತಿಯ ಗ್ರಾಮ ಪಂಚಾಯತಿಗಳಿಗೆ ಮೈಕ್ರೋ ಫೀಡರ್ ಪ್ರಾಂಚೈಜಿಯನ್ನು ಹುವಿಸಕಂನಿಯ ವಿದ್ಯುತ್ ಕಂದಾಯ ವಸೂಲಾತಿ ಮಾಡುವುದಕ್ಕೆ ಪ್ರೋತ್ಸಾಹ ಧನ (Incentive) ಆಧಾರದ ಮೇಲೆ ನೇಮಕ ಮಾಡಿಕೊಳ್ಳುವುದಕ್ಕಾಗಿ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಮೈಕ್ರೋ ಫೀಡರ್ ಪ್ರಾಂಚೈಸಿಯು ಪ್ರತಿ ತಿಂಗಳಿಗೆ ಗೊತ್ತುಪಡಿಸಿದ ಪ್ರವರ್ಗದ ಗ್ರಾಹಕರ ಮಾಪಕಗಳನ್ನು ಓದಿ, ಶೇಕಡಾ 100 ರಷ್ಟು ಬಿಲ್ ವಿತರಣೆ ಮಾಡಿ, ಹುವಿಸಕಂನಿ., ನಿಗದಿಪಡಿಸಿರುವ ಮಾಸಿಕ ಮೂಲ ಗುರಿಯನ್ನು ಸಾಧಿಸಿದಲ್ಲಿ ರೂ.12,000/-(ಹನ್ನೆರಡು ಸಾವಿರ ರೂಗಳು ಮಾತ್ರ)ವನ್ನು "ಕನಿಷ್ಠ ಖಚಿತ ಪ್ರೋತ್ಸಾಹ ಧನ" ವಾಗಿ ನೀಡಲಾಗುವುದು. ಎಂಎಫ್.ಎಫ್.ಗಳ ಕಾರ್ಯನಿರ್ವಹಣೆಯ ಆಧಾರದ ಮೇಲೆ ಹೆಚ್ಚುವರಿ ಪ್ರೋತ್ಸಾಹ ಧನ ನೀಡಲಾಗುವುದು.

➢ **ಮೈಕ್ರೋ-ಫೀಡರ್ ಪ್ರಾಂಚೈಸಿ ಸ್ಥಾನಗಳು ಖಾಲಿ ಇರುವ ಗ್ರಾಮ ಪಂಚಾಯತಿಗಳ ವಿವರ:**

| ಕ್ರ. ಸಂ | ವಿಭಾಗದ ಹೆಸರು | ಉಪ ವಿಭಾಗದ ಹೆಸರು | ಗ್ರಾಮ ಪಂಚಾಯತಿ ಹೆಸರು | ಎಂ.ಎಫ್.ಎಫ್. ಸಂಖ್ಯೆ |
|---|---|---|---|---|
| 1 | **ಗ್ರಾಮೀಣ ವಿಭಾಗ, ಹುಬ್ಬಳ್ಳಿ** | ಗ್ರಾಮೀಣ ಉಪವಿಭಾಗ, ಹುಬ್ಬಳ್ಳಿ | ಬೆಳಗಲಿ | 1 |
| 2 | | | ಹಳ್ಳಿಯಾಳ | 1 |
| 3 | | | ಅಂಚಟಗೇರಿ | 1 |
| 4 | | | ರಾಯನಾಳ | 1 |
| 5 | | ಉಪವಿಭಾಗ, ಕುಂದಗೋಳ | ಯರಗುಪ್ಪಿ | 1 |
| 6 | | | ಬೆಟದೂರ | 1 |
| 7 | | ನವಲಗುಂದ ಉಪ ವಿಭಾಗ | ಮೊರಬ-1 | 1 |
| 8 | **ಕಾ ಮತ್ತು ಪಾ ಗ್ರಾಮೀಣ ವಿಭಾಗ, ಧಾರವಾಡ** | ಗ್ರಾಮೀಣ ಉಪವಿಭಾಗ, ಧಾರವಾಡ | ನಿಗದಿ | 1 |
| 9 | | | ಹಳ್ಳಿಗೇರಿ | 1 |
| 10 | | | ಕೋಟೂರ | 1 |
| 11 | | | ಹೊನ್ನಾಪೂರ | 1 |
| 12 | | ಕಲಘಟಗಿ ಉಪ ವಿಭಾಗ | ದುಮ್ಮವಾಡ | 1 |
| 13 | | | ಮುಕ್ಕಲ್ | 1 |

....2

| ಕ್ರ. ಸಂ | ವಿಭಾಗದ ಹೆಸರು | ಉಪ ವಿಭಾಗದ ಹೆಸರು | ಗ್ರಾಮ ಪಂಚಾಯತಿ ಹೆಸರು | ಎಂ.ಎಫ್.ಎಫ್. ಸಂಖ್ಯೆ |
|---|---|---|---|---|
| 14 | ಕಾ ಮತ್ತು ಪಾ ವಿಭಾಗ, ಗದಗ | ಗ್ರಾಮೀಣ ಉಪ ವಿಭಾಗ ಗದಗ | ಬೆಳದಡಿ | 1 |
| 15 | | ಮುಂಡರಗಿ ಉಪ ವಿಭಾಗ | ಹಮ್ಮಿಗಿ | 1 |
| 16 | | | ಮೇವುಂಡಿ | 1 |
| 17 | | ಲಕ್ಷ್ಮೇಶ್ವರ ಉಪ ವಿಭಾಗ | ಬಾಲೆಹೊಸೂರ | 1 |
| 18 | | | ಶಿಗ್ಲಿ | 1 |
| 19 | | | ರಾಮಗಿರಿ | 1 |
| 20 | | | ಬೆಳ್ಳಟ್ಟಿ-1 | 1 |
| 21 | | | ಕುಗನೂರ | 1 |
| 22 | | | ಮಾಗಡಿ | 1 |
| 23 | ಕಾ ಮತ್ತು ಪಾ ವಿಭಾಗ, ರೋಣ | ರೋಣ ಉಪ ವಿಭಾಗ | ಹೊಳೆಆಲೂರ | 1 |
| 24 | | | ಹಿರೇಹಾಳ | 1 |
| 25 | | ಗಜೇಂದ್ರಗಡ ಉಪ ವಿಭಾಗ | ಗೋಗೇರಿ | 1 |
| 26 | | ನರಗುಂದ ಉಪ ವಿಭಾಗ | ಶಿರೋಳ | 1 |

➢ **ಅರ್ಹತೆ:**

1. ಮೈಕ್ರೋ ಫೀಡರ್ ಫ್ರಾಂಚೈಸಿಗಾಗಿ ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಸಂಬಂಧಿಸಿದ ಆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ವಾಸವಾಗಿರಬೇಕು. ವಾಸ ಸ್ಥಳದ(ರಹವಾಸಿ) ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಗ್ರಾಮ ಪಂಚಾಯತಿಯ ಪಂಚಾಯತ ಅಭಿವೃದ್ಧಿ ಅಧಿಕಾರಿರವರಿಂದ ಪಡೆದಿರಬೇಕು.
2. **ಅಭ್ಯರ್ಥಿಯ ಕನಿಷ್ಟ ವಿದ್ಯಾರ್ಹತೆ:**
   **ಪಿ.ಯು.ಸಿ. ದ್ವಿತಿಯ ವರ್ಷ ಪಾಸಾಗಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು.**
   ಅ) ತತ್ಸಮಾನ ವಿದ್ಯಾರ್ಹತೆ ಕುರಿತು ಸಂಬಂಧಪಟ್ಟ ಪ್ರಾಧಿಕಾರದಿಂದ ದೃಢೀಕರಣ ಪತ್ರ ಅಥವಾ ಸರಕಾರಿ ಆದೇಶದ ಪ್ರತಿಯನ್ನು ಅರ್ಜಿದಾರರು ಸಲ್ಲಿಸತಕ್ಕದ್ದು.
   ಆ) ದ್ವಿತಿಯ ಪಿ.ಯು.ಸಿಯಲ್ಲಿ ಗಳಿಸಿದ ಅಂಕಗಳನ್ನು ಮೇರಿಟ್‌ಗೆ ಪರಿಗಣಿಸಲಾಗುವುದು.
   ಇ) ತತ್ಸಮಾನ ವಿದ್ಯಾರ್ಹತೆಗೆ ಗಳಿಸಿದ ಅಂಕಗಳನ್ನು ಪರಿಗಣಿಸುವ ಕುರಿತು ಸಂಬಂಧಪಟ್ಟ ಪ್ರಾಧಿಕಾರದಿಂದ ದೃಢೀಕರಿಸಿದ ಪತ್ರ ಅಥವಾ ಸರಕಾರಿ ಆದೇಶದ ಪ್ರತಿಯನ್ನು ಅರ್ಜಿದಾರರು ಸಲ್ಲಿಸತಕ್ಕದ್ದು. ಅರ್ಜಿದಾರರು ನೋಟರಿಯವರಿಂದ ದೃಢೀಕರಿಸಿದ ಪ್ರತಿಯನ್ನು ಸಲ್ಲಿಸುವುದು.
3. ಅಭ್ಯರ್ಥಿಯು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದಂದು 18 ರಿಂದ 40 ವರ್ಷ ವಯಸ್ಸಿನ ವಯೋಮಿತಿಯಲ್ಲಿರಬೇಕು.
4. ಅಯ್ಕೆಯಾದ ಅಭ್ಯರ್ಥಿಗಳು ಸಂಬಂಧಪಟ್ಟ ಗ್ರಾಮ ಪಂಚಾಯಿತಿಯ ಕಂದಾಯ ವಸೂಲಾತಿ ಪ್ರಮಾಣವನ್ನು ಆಧರಿಸಿ, ಬ್ಯಾಂಕ್ ಖಾತರಿ ಹಣವನ್ನು ಕನಿಷ್ಠ ರೂ. 50,000/- ಅಥವಾ ಗರಿಷ್ಠ 5 ದಿನಗಳ ತಿಂಗಳಿನ ಸರಾಸರಿ ಕಂದಾಯ ಬೇಡಿಕೆ ಪ್ರಮಾಣ, ಇವೆರಡರಲ್ಲಿ ಯಾವುದು ಹೆಚ್ಚಿರುವುದೋ, ಅದಕ್ಕೆ ಸಮನಾಗಿ ಬ್ಯಾಂಕ್ ಖಾತರಿ ಹಣವನ್ನು ಬ್ಯಾಂಕ್ ಗ್ಯಾರಂಟಿ ನೀಡಲು ಶಕ್ತರಾಗಿರಬೇಕು. ಸದರಿ ಬ್ಯಾಂಕ್ ಗ್ಯಾರಂಟಿಯು 12+3=15 ತಿಂಗಳ ಅವಧಿಗೆ ಉರ್ಜಿತದಲ್ಲಿರತಕ್ಕದ್ದು. ಸದರಿ ಬ್ಯಾಂಕ್ ಖಾತರಿಯನ್ನು ಹುಬ್ಬಳ್ಳಿ ವಿದ್ಯುತ್ ಸರಬುರಾಜು ಕಂಪನಿಯ ಅವಶ್ಯಕತೆಯಂತೆ ವಿಸ್ತರಿಸಬಹುದಾಗಿದೆ.

......3

5. ಕಂಪನಿ ಕಛೇರಿಯ ಪ್ರತ ಸಂಖ್ಯೆ : ಹುವಿಸಕಂನಿ/ಆ.ಸ/ಉಲೆನಿ(ಕಂ)/BZ&HZ/11-12/CYS-1522 ದಿನಾಂಕ : 15-11-2011 ರಲ್ಲಿ ಮಾಸಿಕ ರೂ. 1.00 (ಒಂದು) ಲಕ್ಷಕ್ಕಿಂತಲೂ ಹೆಚ್ಚು ಬೇಡಿಕೆಯಾಗುವ ಗ್ರಾಮ ಪಂಚಾಯಿತಿಗಳ ಯಾದಿಯನ್ನು ತಯಾರಿಸಿ ಅದರಲ್ಲಿ ಅತೀ ಹೆಚ್ಚು ಬೇಡಿಕೆಯುಳ್ಳ ಶೇ. 20 ರಷ್ಟು ಗ್ರಾಮ ಪಂಚಾಯಿತಿಗಳ ಮೀಟರ್ ರೀಡಿಂಗ್ ಮತ್ತು ವಸೂಲಾತಿ ಕಾರ್ಯವನ್ನು ಕಂಪನಿ ಸಿಬ್ಬಂದಿಗಳಿಂದ ನಿರ್ವಹಿಸಬೇಕಾಗಿರುವುದರಿಂದ ಸದರ ಎಮ್.ಎಫ್.ಎಫ್ ರವರ ಮೇಲೆ ಯಾವುದೇ ದೂರುಗಳು ಇಲ್ಲದಿದ್ದಾಗ್ಯೂ ಒಂದು ವೇಳೆ ವಜಾಗೊಳಿಸಿದ್ದಲ್ಲಿ ಅವರಿಗೂ ಸಹ ಅವರವರ ಜಿಲ್ಲೆಯ ವ್ಯಾಪ್ತಿಯಲ್ಲಿ ಜರುಗುವ ಈ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ನೀಡುವುದು.

## ➢ ಆಯ್ಕೆ ಸಮೀತಿಯ ಸದಸ್ಯರು:

ಹುಬ್ಬಳ್ಳಿ ವೃತ್ತದ ಅಧೀಕ್ಷಕ ಇಂಜಿನೀಯರ(ವಿ), ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಆಯಾ ವಿಭಾಗಗಳ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಲೆಕ್ಕಾಧಿಕಾರಿಗಳು ಮತ್ತು ಆಯಾ ಉಪವಿಭಾಗಗಳ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ).

## ➢ ಆಯ್ಕೆಯ ಪ್ರಕ್ರಿಯೆ

1) ಮೇರಿಟ್ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.
2) ಮೂಲ ದಾಖಲಾತಿಗಳ ಪರಿಶೀಲನೆ ಮತ್ತು ದೃಢೀಕರಣ.

## ➢ ಎಂ.ಎಫ್.ಎಫ್ ಗಳ ಕಾನೂನುಬದ್ಧ ಸ್ಥಾನಮಾನ:

1. ಎಂ.ಎಫ್.ಎಫ್ ಆಗಿ ಕಾಯನಿರ್ವಹಿಸುವ ವ್ಯಕ್ತಿಯು ಹುವಿಸಕಂನಿಯ ಒಬ್ಬ ಏಜೆಂಟ್ ಆಗಿ ಕಾರ್ಯವ್ಯಾಪ್ತಿ ಪ್ರದೇಶದಲ್ಲಿ ಕಾರ್ಯನಿರ್ವಹಿಸಬೇಕಾಗುತ್ತದೆ ಮತ್ತು ಯಾವುದೇ ಕಾರಣಕ್ಕೂ ಆತನನ್ನು ಹುವಿಸಕಂನಿಯ ನೌಕರನೆಂದು ಪರಿಗಣಿಸಲಾಗುವುದಿಲ್ಲ.
2. ಎಂ.ಎಫ್.ಎಫ್ ಆಗಿ ಕಾರ್ಯನಿರ್ವಹಿಸುವ ವ್ಯಕ್ತಿಯು, ತನಗೆ ವಹಿಸಿರುವ ಕಾರ್ಯ ವ್ಯಾಪ್ತಿಯಲ್ಲಿ ತನ್ನ ಕಾರ್ಯನಿರ್ವಹಣೆಗಾಗಿ ತನ್ನ ಅಧೀನದಲ್ಲಿ ಉಪ ಏಜೆಂಟ್/ಡೀಲರ್‌ರನ್ನು ನೇಮಕ ಮಾಡಿಕೊಳ್ಳುವಂತಿಲ್ಲ.

## ➢ ಮೈಕ್ರೋ ಫೀಡರ್ ಫ್ರಾಂಚೈಸಿಯ ಜವಾಬ್ದಾರಿಗಳು :

1. ಎಲ್.ಟಿ-1, ಎಲ್.ಟಿ-2, ಎಲ್.ಟಿ-3, ಎಲ್.ಟಿ-4(10 ಹೆಚ್.ಪಿ ಗಿಂತ ಮೇಲ್ಪಟ್ಟ ಸ್ಥಾವರಗಳನ್ನು ಹೊರತುಪಡಿಸಿ), ಎಲ್.ಟಿ-5 (40 ಹೆಚ್. ಸಾಮಾರ್ಥ್ಯದವರೆಗೆ) ಮತ್ತು ಎಲ್.ಟಿ-6 ಪ್ರವರ್ಗದ ಸ್ಥಾವರಗಳ ಮಾಪಕ ಓದುವಿಕೆ, ಬಿಲ್ ವಿತರಣೆ ಮತ್ತು ಕಂದಾಯ ವಸೂಲಾತಿ ಮಾಡುವುದು.
2. ಗ್ರಾಹಕರಿಂದ ವಸೂಲು ಮಾಡಿದ ಹಣವನ್ನು ಅದೇ ದಿನ ಅಥವಾ ನಂತರದ ತಕ್ಷಣದ ಕೆಲಸದ ದಿನಾಂಕದಂದು ನಿಗದಿಪಡಿಸಿರುವ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯ ಕಛೇರಿಯಲ್ಲಿ ಸಂದಾಯ ಮಾಡತಕ್ಕದ್ದು.
3. ದಿನವಹಿ ಮಾಪಕ ಓದುವಿಕೆಯನ್ನು ಪ್ರತಿ ತಿಂಗಳ 15 ನೇ ದಿನಾಂಕದೊಳಗೆ ಪೂರ್ಣಗೊಳಿಸಬೇಕು ಹಾಗೂ ಮಾಪಕ ಓದಿದ ಸ್ಥಾವರಗಳ ವಿವರಗಳನ್ನು ಅದೇ ದಿನ ಸಿಸ್ಟಮ್‌ಗೆ ಗಣಕಯಂತ್ರ(Computer) ನಲ್ಲಿ ಮಾಡಬೇಕು.
4. ಎಂ.ಎಫ್.ಎಫ್ ರವರು ತಾವು ನಿಯಮಿತವಾಗಿ ಮಾಡುವ ಮಾಪಕ ಓದುವಿಕೆ, ಬಿಲ್ ವಿತರಣೆ ಮತ್ತು ಕಂದಾಯ ವಸೂಲಾತಿ ಕಾರ್ಯಗಳಿಗೆ ಯಾವುದೇ ತೊಂದರೆ/ಅಡ್ಡಿಯಿಲ್ಲದ ರೀತಿಯಲ್ಲಿ ಗ್ರಾಹಕರ ಸ್ಥಾವರಗಳು, ಫೀಡರ್‌ಗಳು ಮತ್ತು ವಿತರಣಾ ಪರಿವರ್ತಕಗಳಿಗೆ ಮಾಪಕ ಅಳವಡಿಕೆ, ವಿತರಣಾ ಪರಿವರ್ತಕಗಳ ಮಾಪಕ ಓದುವಿಕೆ, ಗ್ರಾಹಕ ಸೂಚ್ಯಂಕ ಹಾಗೂ ಗ್ರಾಹಕರ ಸ್ಥಾವರಗಳಿಗೆ ವಿದ್ಯುತ್ ನಿಲುಗಡೆ ಮಾಡುವ ಕಾರ್ಯದಲ್ಲಿ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯೊಂದಿಗೆ ಸಹಕರಿಸುವುದು.
5. ವಿದ್ಯುತ ಸರಬರಾಜು ಸಂಬಂಧಿತ ದೂರುಗಳಿದ್ದಲ್ಲಿ, ಗ್ರಾಹಕರಿಗೆ ಸೇವಾ ಕೇಂದ್ರದ ದೂರವಾಣಿ ಸಂಖ್ಯೆಯನ್ನು ನೀಡುವುದು.
6. ಅನಧಿಕೃತ ವಿದ್ಯುತ್ ಸಂಪರ್ಕವನ್ನು ಸಕ್ರಮಗೊಳಿಸಲು ಸಹಕರಿಸುವುದು.
7. ಅಪಾಯಕಾರಿ ಸ್ಥಾವರಗಳ ಸ್ಥಳಗಳನ್ನು ಪತ್ತೆ ಹಚ್ಚಲು ಸಹಕರಿಸುವುದು.

....4

8. ಹಳೆಯ/ಹಾಳಾಗಿರುವ(MNR) ಮಾಪಕಗಳನ್ನು ಗುರುತಿಸಿ, ಉತ್ತಮ ಮಾಪಕಗಳಿಗೆ ಬದಾಲಾಯಿಸಲು ಅನುಕೂಲವಾಗುವಂತೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಸಲ್ಲಿಸುವುದು.
9. ಬೀದಿ ದೀಪ ಮತ್ತು ಎಲ್.ಟಿ ಪ್ರವರ್ಗದ ನೀರು ಸರಬರಾಜು ಸ್ಥಾವರಗಳ ಮಾಪಕ ಓದುವುದು ಹಾಗೂ ಬಿಲ್ ವಿತರಿಸುವುದು.
10. ಬೀದಿ ದೀಪ, ನೀರು ಸರಬರಾಜು ಹಾಗೂ ನೀರಾವರಿ ಪಂಪ್‌ಸೆಟ್‌ಗಳಿಗೆಂದೇ ಮೀಸಲಿಟ್ಟ ವಿತರಣಾ ಪರಿವರ್ತಕಗಳ ಮಾಪಕಗಳ ಓದುವಿಕೆ ಹಾಗೂ ಮಾಪಕ ಓದುವಿಕೆಯಲ್ಲಿ ಯಾವುದೇ ವ್ಯತ್ಯಾಸಗಳು ಕಂಡುಬಂದಲ್ಲಿ ವರದಿಯನ್ನು ಉಪ ವಿಭಾಗ ಕಛೇರಿಗೆ ವರದಿ ಮಾಡುವುದು.
11. ಮೈಕ್ರೋ ಫೀಡರ್ ಪ್ರಾಂಚೈಸಿಗಳು, ತಮಗೆ ಒದಗಿಸಿರುವ ಗುರುತು ಪಟ್ಟಿ/ಬ್ಯಾಡ್ಜನ್ನು ಕಡ್ಡಾಯವಾಗಿ ಧರಿಸಿ ಕಂಪನಿಯ ಕರ್ತವ್ಯ ನಿರ್ವಹಿಸತಕ್ಕದ್ದು. ಈ ಗುರುತು ಪಟ್ಟಿ/ಬ್ಯಾಡ್ಜ ಅನ್ನು ಸುಸ್ಥಿತಿಯಲ್ಲಿ ಇರಿಸಿಕೊಳ್ಳತಕ್ಕದ್ದು. ಈ ನಿಟ್ಟಿನಲ್ಲಿ ಒದಗಿಸಿರುವ ಅವಕಾಶಗಳನ್ನು ಮೈಕ್ರೋ ಫೀಡರ್ ಪ್ರಾಂಚೈಯಿಸಿಗಳು ದುರುಪಯೋಗಪಡಿಸಿಕೊಳ್ಳತಕ್ಕದ್ದಲ್ಲ.
12. ಯಾವುದೇ ಕಾರಣಕ್ಕೆ ಸ್ಥಾವರದ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸದಾಗ ಅಂತಹ ಸ್ಥಾವರದ ಮಾಪಕದಲ್ಲಿ ದಾಖಲಾಗಿರುವ ಅಂತಿಮ ರೀಡಿಂಗನ್ನು ಆರ್.ಆರ್. ಸಂಖ್ಯೆ/ಸ್ಥಾವರದ ಐ.ಡಿ. ಅನುಸಾರ ದಾಖಲಿಸಿಕೊಂಡು ನಿಗದಿಪಡಿಸಿದ ನಮೂನೆಯ ಪ್ರಕಾರ ಮಾಹಿತಿಯನ್ನು ಸಲ್ಲಿಸುವುದು.
13. ವಿದ್ಯುತ್ ಸರಬರಾಜು ಕಂಪನಿಯು ಕಾಲ-ಕಾಲಕ್ಕೆ ಪ್ರಕಟಿಸುವ ವಿದ್ಯುತ್ ಸುರಕ್ಷತಾ ವಿಧಾನಗಳ ಕುರಿತು ಸಾಮಾನ್ಯ ಜನತೆಗೆ ಅರಿವು ಮೂಡಿಸುವುದು.
14. ಹೊಸ ವಿದ್ಯುತ್ ಸಂಪರ್ಕ ಪಡೆಯಲು ಇಚ್ಚಿಸುವ ಸಾರ್ವಜನಿಕರಿಗೆ ಸೂಕ್ತ ಸಹಾಯ/ಮಾರ್ಗದರ್ಶನ ನೀಡಿ, ವಿದ್ಯುತ್ ಸಂಪರ್ಕ ಪಡೆಯಲು ಅನುಸರಿಸಬೇಕಾದ ಕಂಪನಿಯ ನಿಯಮಗಳ ಬಗ್ಗೆ ಮಾಹಿತಿ ನೀಡುವುದು.
15. ಹುವಿಸಕಂನಿಯು ಪ್ರತಿ ಮೈಕ್ರೋ ಫೀಡರ್ ಪ್ರಾಂಚೈಸಿಗಳಿಗೆ ಒಂದು ಅಂಡ್ರಾಯ್ಡ್ ಸ್ಮಾರ್ಟ ಪೋನ್/ಸ್ಮಾಟ್ ಬಿಲ್ಲಿಂಗ್ ಮಷೀನ್(ಎಸ್.ಬಿ.ಎಂ)/Optical port cable ನ್ನು ಒದಗಿಸುವುದು. ಅಂಡ್ರಾಯ್ಡ್ ಸ್ಮಾರ್ಟ ಪೋನ್/ಸ್ಮಾಟ್ ಬಿಲ್ಲಿಂಗ್ ಮಷೀನನ್ನು Optical port cable ನ್ನು ನಿರ್ವಹಿಸುವಲ್ಲಿ ಯಾವುದೇ ನಿರ್ಲಕ್ಷತೆ ತೋರಿ, ಕಳೆದು ಹೋದಲ್ಲಿ/ನಿಷ್ಕ್ರೀಯವಾದಲ್ಲಿ ಸಂಪೂರ್ಣ ವೆಚ್ಚ/ದುರಸ್ಥಿ ವೆಚ್ಚವನ್ನು ಸಂಬಂಧಪಟ್ಟ ಎಂ.ಎಫ್.ಎಫ್. ಭರಿಸಬೇಕು.
16. ಎಂ.ಎಫ್.ಎಫ್.ಆಗಿ ಕಾರ್ಯನಿರ್ವಹಿಸುವ ವ್ಯಕ್ತಿಯು ತನಗೆ ವಹಿಸಿರುವ ಕಾರ್ಯ ವ್ಯಾಪ್ತಿಯಲ್ಲಿ ತನ್ನ ಕಾರ್ಯನಿರ್ವಹಣೆಗಾಗಿ ತನ್ನ ಅಧೀನದಲ್ಲಿ ಉಪ ಏಜೆಂಟ್/ಡೀಲರ್‌ಗಳನ್ನು ನೇಮಕ ಮಾಡಿಕೊಳ್ಳುವಂತಿಲ್ಲ. ಈ ರೀತಿಯ ನೇಮಕಾತಿ ಮಾಡಿರುವುದು ಗಮನಕ್ಕೆ ಬಂದಲ್ಲಿ ಎಂ.ಎಫ್.ಎಫ್ ರವರನ್ನು ಯಾವುದೇ ನೋಟೀಸ್ ನೀಡದೇ ಅವರ ನೇಮಕಾತಿಯನ್ನು ರದ್ದು ಪಡಿಸಲಾಗುವುದು.
17. ಎಂ.ಎಫ್.ಎಫ್. ರವರುಗಳು ಯಾವುದೇ ಸರ್ಕಾರಿ/ಅರೆ ಸರ್ಕಾರಿ/ಸ್ಥಳೀಯ ಸಂಸ್ಥೆ/ರಾಜಕೀಯ ಸಂಸ್ಥೆಗಳಲ್ಲಿ ಯಾವುದೇ ಹುದ್ದೆ/ಸ್ಥಾನ ಹೊಂದಿರತಕ್ಕದ್ದಲ್ಲ.

➢ **ಕನಿಷ್ಠ ಖಚಿತ ಪ್ರೋತ್ಸಾಹ ಧನ:**

**ಮೈಕ್ರೋ ಫೀಡರ್ ಪ್ರಾಂಚೈಸಿಗಳಿಗೆ ಈ ಕೆಳಗಿನಂತೆ ಪ್ರೋತ್ಸಾಹ ಧನ ನೀಡಲಾಗುವುದು.**

1. ಪ್ರತಿ ತಿಂಗಳು ಗೊತ್ತುಪಡಿಸಿದ ಪ್ರವರ್ಗದ ಗ್ರಾಹಕರ ಮಾಪಕಗಳನ್ನು ಓದಿ, ಶೇಕಡಾ 100 ರಷ್ಟು ಬಿಲ್ ವಿತರಣೆ ಮಾಡಿ, ಹುವಿಸಕಂನಿ ನಿಗದಿಪಡಿಸಿರುವ ಮಾಸಿಕ ಮೂಲ ಗುರಿಯನ್ನು ಸಾಧಿಸಿದಲ್ಲಿ ಮೈಕ್ರೋ ಫೀಡರ್ ಪ್ರಾಂಚೈಸಿಗೆ ರೂ. 12,000/- (ರೂ. ಹನ್ನೆರಡು ಸಾವಿರ ರೂಪಾಯಿ ಮಾತ್ರ)ವನ್ನು "ಕನಿಷ್ಠ ಖಚಿತ ಪ್ರೋತ್ಸಾಹ ಧನ"ವಾಗಿ ನೀಡಲಾಗುವುದು.
2. ಹುವಿಸಕಂನಿಯು ಕಾಲ-ಕಾಲಕ್ಕೆ ನಿಗದಿಪಡಿಸಿದ ಬೇಸ್‌ಲೈನ್ ಗುರಿಯು ವಸೂಲಾತಿ ಸಾಧಿಸಿದಲ್ಲಿ ಹೆಚ್ಚುವರಿ ಪ್ರೋತ್ಸಾಹ ಧನವನ್ನು ಕೆಳಗಿನಂತೆ ಷರತ್ತುಗಳಿಗೆ ಒಳಪಟ್ಟಂತೆ ನೀಡಲಾಗುವುದು.
   ಅ) ಎಲ್.ಟಿ-1 (40 ಯೂನಿಟ್‌ಗಳಿಗೆ ಮೇಲ್ಪಟ್ಟ ಸ್ಥಾವರಗಳನ್ನು ಹೊರತುಪಡಿಸಿ), ಎಲ್.ಟಿ-2, ಎಲ್.ಟಿ-3, ಎಲ್.ಟಿ-4 (10 ಹೆಚ್.ಪಿ ಗಿಂತ ಮೇಲ್ಪಟ್ಟ ಸ್ಥಾವರಗಳನ್ನು ಹೊರತುಪಡಿಸಿ), ಎಲ್.ಟಿ-5(40 ಹೆಚ್.ಪಿ ಸಾಮರ್ಥ್ಯದವರೆಗೆ) ಸ್ಥಾವರಗಳ ಪ್ರಸಕ್ತ ತಿಂಗಳಿನ ಬೇಡಿಕೆಯ ಶೇ. 100 ರಷ್ಟು ವಸೂಲಾತಿ ಮಾಡಿದಲ್ಲಿ ಕನಿಷ್ಠ ಖಚಿತ ಪ್ರೋತ್ಸಾಹ ಧನದ ಜೊತೆಗೆ ರೂ.2000/-(ರೂಪಾಯಿ ಎರಡು ಸಾವಿರರಗಳನ್ನು ಮಾತ್ರ)ವನ್ನು ನೀಡಲಾಗುವುದು.

....5

ಆ) ಒಪ್ಪಂದದ ಅವಧಿ ಹೊರತುಪಡಿಸಿ, ಹಿಂದಿನ ದೀರ್ಘಾವಧಿ ವಿದ್ಯುತ್ ಕಡಿತಗೊಂಡ ಸ್ಥಾವರಗಳ ಒಟ್ಟು ಬಾಕಿ ಮೊತ್ತದ ಶೇ 50 ರಷ್ಟು ವಸೂಲಿ ಮಾಡಿದಲ್ಲಿ ರೂ.1000/-(ರೂ. ಒಂದು ಸಾವಿರ ರೂಗಳು ಮಾತ್ರ) ವನ್ನು ಹೆಚ್ಚುವರಿ ಪ್ರೋತ್ಸಾಹ ಧನವನ್ನಾಗಿ ನೀಡಲಾಗುವುದು.

ಇ) ಒಪ್ಪಂದದ ಅವಧಿ ಹೊರತುಪಡಿಸಿ, ಹಿಂದಿನ ದೀರ್ಘಾವಧಿ ವಿದ್ಯುತ್ ಕಡಿತಗೊಂಡ ಸ್ಥಾವಗಳ ಒಟ್ಟು ಬಾಕಿ ಮೊತ್ತದ ಶೇ 50 ರಿಂದ 100 ರವರೆಗೆ ಹೆಚ್ಚು ಮೊತ್ತವನ್ನು ವಸೂಲಿ ಮಾಡಿದಲ್ಲಿ ರೂ.1500/- (ರೂ. ಒಂದು ಸಾವಿರದ ಐದುನೂರುಗಳು ಮಾತ್ರ)ವನ್ನು ಹೆಚ್ಚುವರಿ ಪ್ರೋತ್ಸಾಹ ಧನವನ್ನಾಗಿ ನೀಡಲಾಗುವುದು. (ಹಾಲಿ ಎಂ.ಎಫ್.ಎಫ್ ರವರ ಒಪ್ಪಂದದ ಅವದಿಯಲ್ಲಿ ಸಂಗ್ರಹಿಸಿದ ಬಾಕಿ ಮೊತ್ತಕ್ಕೆ ಯಾವುದೇ ಪ್ರೋತ್ಸಾಹ ಧನ ನೀಡಲಾಗುವುದಿಲ್ಲ).

3. ಅ) ಎಂ.ಎಫ್.ಎಫ್ ತನ್ನ ವ್ಯಾಪ್ತಿಯಲ್ಲಿನ ಎಲ್ಲಾ ಗ್ರಾಹಕರ ಅಧಿಕ ಭದ್ರತಾ ಠೇವಣಿಯನ್ನು ಮೂರು ತಿಂಗಳಲ್ಲಿ ವಸೂಲಿ ಮಾಡಿದಲ್ಲಿ ರೂ. 500/- (ರೂ. ಐದು ನೂರು ಮಾತ್ರ)ವನ್ನು ಹೆಚ್ಚುವರಿ ಪ್ರೋತ್ಸಾಹ ಧನ ನೀಡಲಾಗುವುದು.

ಆ) ಎಂ.ಟಿ ವಿಭಾಗ/ಜಾಗೃತದಳದಿಂದ ವಿಧಿಸಿದ ಹಿಂಬಾಕಿ ಶುಲ್ಕ ವಸೂಲಾತಿ ಇತರೆ ಯಾವುದೇ ಪರಿಶೋಧಿತ ಕಡಿಮೆ ಬೇಡಿಕೆ (Audit Short Claim) ಯಿಂದಾಗಿ ವಿಧಿಸಿದ ಹಿಂಬಾಕಿ ಶುಲ್ಕ ವಸೂಲಾತಿ, ಸರ್ಕಾರದ ಹೊಂದಾಣಿಕೆಗಳನ್ನು ಮೈಕ್ರೋ ಫೀಡರ್ ಫ್ರಾಂಚೈಸಿಗೆ ನೀಡಬೇಕಾದ ಪ್ರೋತ್ಸಾಹ ಧನ ಲೆಕ್ಕಾಚಾರಕ್ಕೆ ಪರಿಗಣಿಸಲಾಗುವುದಿಲ್ಲ.

ಇ) ಹೆಚ್ಚುವರಿ ಪ್ರೋತ್ಸಾಹ ಧನವನ್ನು ಲೆಕ್ಕಿಸುವಾಗ ಒಪ್ಪಂದದ ಅವಧಿಯಲ್ಲಿ ಸಂಗ್ರಹಿಸಿರುವ ಬಾಕಿಯನ್ನು ಪರಿಗಣಿಸಲಾಗುವುದಿಲ್ಲ.

4. ನೀರಾವರಿ ಪಂಪಸೆಟ್‌ಗಳಿಗೆ ವಿದ್ಯುತ್ ಸರಬರಾಜು ಮಾಡುವುದಕ್ಕಾಗಿಯೇ ಮೀಸಲಿಟ್ಟ ವಿತರಣಾ ಪರಿವರ್ತಕಗಳ ಮಾಪಕ ಒದುವುದಕ್ಕೆ ಪ್ರತಿ ಸ್ಥಾವರಕ್ಕೆ ರೂ. 25/-(ರೂ. ಇಪ್ಪತ್ತೈದು ರೂಪಾಯಿ ಮಾತ್ರ) ವನ್ನು ಪಾವತಿಸಲಾಗುವುದು.

5. ಕುಡಿಯುವ ನೀರಿನ ಸ್ಥಾವರಗಳು ಮತ್ತು ಬೀದಿ ದೀಪ ಸ್ಥಾವರಗಳ ಮಾಪಕ ಓದುವುದಕ್ಕೆ ಪ್ರತಿ ಸ್ಥಾವರಕ್ಕೆ ರೂ. 25/- (ರೂ. ಇಪ್ಪತ್ತೈದು ರೂಪಾಯಿ ಮಾತ್ರ)ವನ್ನು ಪಾವತಿಸಲಾಗುವುದು.

6. ವಿತರಣಾ ಪರಿವರ್ತಕಗಳಿಗೆ ಮಾಪಕವನ್ನು ಅಳವಡಿಸಿದಲ್ಲಿ, ಕಾರ್ಯ ಸಾಧನೆ ಮಾನದಂಡವನ್ನು Input Energy ಆಧಾರದಲ್ಲಿ ಮಾರ್ಪಾಡು ಮಾಡಲಾಗುವುದು. ಈ ನಿಟ್ಟನಲ್ಲಿ ಹುವಿಸಕಂನಿಯು ಕಾರ್ಯಸಾಧನೆ ಅಳತೆ ಹಾಗೂ ಪ್ರೋತ್ಸಾಹ/ದಂಡ ನೀಡಲು ಸೂಕ್ತ ವಿಧಾನವನ್ನು ರೂಪಿಸಿ, ಅದರಂತೆ ಪ್ರೋತ್ಸಾಹ ಧನವನ್ನು ನಿಗದಿಪಡಿಸಲಾಗುವುದು.

7. ಮಾಪಕ ಓದುವ ಸಮಯದಲ್ಲಿ ಪತ್ತೆ ಹಚ್ಚುವ ಅನಧಿಕೃತ/ವಿದ್ಯುತ್ ಕಳ್ಳತನದ ಪ್ರಕರಣಗಳನ್ನು ಶಾಕಾಧಿಕಾರಿಯವರಿಗೆ ವರದಿ ಮಾಡಿದಲ್ಲಿ, ರೂ. 150/- (ರೂ. ಒಂದುನೂರಾ ಐವತ್ತು ರೂಪಾಯಿ ಮಾತ್ರ) ವನ್ನು ಪ್ರೋತ್ಸಾಹ ಧನ ನೀಡಲಾಗುವುದು.

8. ಅನಧಿಕೃತ ನೀರಾವರಿ ಪಂಪ್‌ಸೆಟ್ ಗಳು ಹಾಗೂ ಕುಡಿಯುವ ನೀರಿನ ಸ್ಥಾವರಗಳನ್ನು ಸಕ್ರಮಗೊಳಿಸಲು ಸಹಕರಿಸಿದಲ್ಲಿ ಪ್ರತಿ ಸ್ಥಾವರಕ್ಕೆ ರೂ. 100/- (ರೂ. ಒಂದು ನೂರು ರೂಪಾಯಿ ಮಾತ್ರ)ವನ್ನು ಪ್ರೋತ್ಸಾಹ ಧನ ನೀಡಲಾಗುವುದು.

9. ಮೈಕ್ರೋ ಫೀಡರ್ ಫ್ರಾಂಚೈಸಿಯವರಿಗೆ Mobile Cash Collection (MCC) ಮೂಲಕ ಮಾಡುವ "ಪ್ರತಿ" ವ್ಯವಹಾರಕ್ಕೆ ಕೆಳಗಿನಂತೆ ಹೆಚ್ಚುವರಿ ಪ್ರೋತ್ಸಾಹ ಧನ ನೀಡಲಾಗುವುದು.

ಅ) ಒಟ್ಟು ಸ್ಥಾವರಗಳಲ್ಲಿ ಶೇ 25 ರಿಂದ ಶೇ 50 ರವರೆಗೆ ನೀಡಿದ ಪ್ರತಿ ರಶೀದಿಗೆ ರೂ.. 1.00/- ರಷ್ಟು.

ಆ) ಒಟ್ಟು ಸ್ಥಾವರಗಳಲ್ಲಿ ಶೇ 50 ರಿಂದ ಶೇ 75 ರವರೆಗೆ ನೀಡಿದ ಪ್ರತಿ ರಶೀದಿಗೆ ರೂ. 2.00/- ರಷ್ಟು.

ಇ) ಒಟ್ಟು ಸ್ಥಾವರಗಳಲ್ಲಿ ಶೇ 75 ರಿಂದ ಶೇ 90 ರವರೆಗೆ ನೀಡಿದ ಪ್ರತಿ ರಶೀದಿಗೆ ರೂ. 2.50/- ರಷ್ಟು

ಈ) ಒಟ್ಟು ಸ್ಥಾವರಗಳಲ್ಲಿ ಶೇ 90 ರಷ್ಟಿಕ್ಕಿಂತ ಮೇಲ್ಪಟ್ಟು ನೀಡಿದ ಪ್ರತಿ ರಶೀದಿಗೆ ರೂ. 3.00/- ರಷ್ಟು ಮೊತ್ತವನ್ನು ಎಂ.ಎಫ್.ಎಫ್.ಗೆ ಪಾವತಿಸಲಾಗುವುದು.

10. ಮೈಕ್ರೋ ಫೀಡರ್ ಫ್ರಾಂಚೈಸಿಯು ಕಾರ್ಯನಿರ್ವಹಿಸುವ ಸಮಯದಲ್ಲಿ, ಮಾರಣಾಂತಿಕವಲ್ಲದ (Non-Fatal) ಅಪಘಾತಕ್ಕೊಳಗಾದರೆ, ಮಾನವೀಯತೆಯ ದೃಷ್ಟಿಯಿಂದ ಗರಿಷ್ಠ ರೂ. 5000/- (ರೂ ಐದು ಸಾವಿರಗಳು ಮಾತ್ರ) ಅಥವಾ ವೈದ್ಯಕೀಯ ವೆಚ್ಚ, ಯಾವುದು ಕಡಿಮೆಯೋ ಆ ಮೊತ್ತವನ್ನು ನೀಡಲಾಗುವುದು. ಒಂದು ವೇಳೆ ಎಂ.ಎಫ್.ಎಫ್ ಕಾರ್ಯನಿರ್ವಹಿಸುವ ಸಮಯದಲ್ಲಿ ಅಪಘಾತದಿಂದ

....6

ಮರಣ ಹೊಂದಿದರೆ ರೂ. 2,00,000/-(ರೂ. ಎರಡು ಲಕ್ಷ ಮಾತ್ರ)ಗಳನ್ನು ಪರಿಹಾರವಾಗಿ ನೀಡಲಾಗುವುದು.

> **ದಂಡ:**

1. **ಅ)** ಮೈಕ್ರೋ ಫೀಡರ್ ಪ್ರಾಂಚೈಸಿಯು ಶೇಕಡಾ 100 ರಷ್ಟು ಬಿಲ್ ವಿತರಿಸದಿದ್ದರೆ ಹಾಗೂ ಕನಿಷ್ಠ ಮೂಲ ವಸೂಲಾತಿ ಗುರಿಯನ್ನು ಸಾಧಿಸದಿದ್ದಲ್ಲಿ ಅವರಿಗೆ ನೀಡುವ ರೂ. 12,000/- ಗಳ ಕನಿಷ್ಠ ಪ್ರೋತ್ಸಾಹ ಧನದಲ್ಲಿ ಶೇಕಡಾ 5 ರಷ್ಟನ್ನು ದಂಡದರೂಪದಲ್ಲಿ ವಿಧಿಸಿ, ಕಡಿತಗೊಳಿಸಲಾಗುವುದು.

   **ಆ)** ಒಂದು ವೇಳೆ ತಪ್ಪು ರೀಡಿಂಗ್‌ನ್ನು ಸಲ್ಲಿಸಿದಲ್ಲಿ, ಒಪ್ಪಂದವನ್ನು ರದ್ದು ಪಡಿಸಲಾಗುವುದು ಹಾಗೂ ಎಂ.ಎಫ್.ಎಫ್ ರವರನ್ನು ಕಾರ್ಯವಿಮುಕ್ತಿಗೊಳಿಸಲಾಗುವುದು.

   **ಇ)** ಮೈಕ್ರೋ ಫೀಡರ್ ಪ್ರಾಂಚೈಸಿಯು ಬೀದಿ ದೀಪ ಹಾಗೂ ನೀರು ಸರಬರಾಜು ಸ್ಥಾವರಗಳ ಮಾಪಕವನ್ನು ಓದದಿದ್ದಲ್ಲಿ. ಪ್ರತಿ ಸ್ಥಾವರಕ್ಕೆ ರೂ. 20/- ದಂಡವನ್ನು ವಿಧಿಸಿ, ಎಂ.ಎಫ್.ಎಫ್.ಗೆ ನೀಡಬೇಕಾದ ಪ್ರೋತ್ಸಾಹ ಧನದಲ್ಲಿ ಕಡಿತಗೊಳಿಸಲಾಗುವುದು.

   **ಈ)** ಮಾಪಕ ಓದಿದ ಸ್ಥಾವರಗಳ ವಿವರಗಳನ್ನು ಅದೇ ದಿನ ಗಣಕಯಂತ್ರ(Computer) ನಲ್ಲಿ ಅಪ್ಲೋಡ್ ಮಾಡದಿದ್ದಲ್ಲಿ ಪ್ರತಿ ದಿನಕ್ಕೆ ರೂ. 10/- ದಂಡವನ್ನು ವಿಧಿಸಲಾಗುವುದು.

   **ಉ)** ಮಾಪಕ ಓದುವಿಕೆಯನ್ನು ಪ್ರತಿ ತಿಂಗಳ 15 ನೇ ದಿನಾಂಕದೊಳಗೆ ಪೂರ್ಣಗೊಳಿಸದಿದ್ದಲ್ಲಿ, ದಿನಾಂಕ:16 ರಿಂದ ಪ್ರತಿ ದಿನಕ್ಕೆ ರೂ. 100 ರ ದಂಡವನ್ನು ವಿಧಿಸಲಾಗುವುದು.

> **ತಿಳುವಳಿಕೆ ಒಡಂಬಡಿಕೆಯನ್ನು ರದ್ದು ಮಾಡುವುದು:**

2. ಈ ಒಪ್ಪಂದದ ಅವಧಿಯು ಒಂದು ವರ್ಷದ್ದಾಗಿರುತ್ತದೆ. ಇಂತಹ ಅವಧಿ ಪೂರ್ವ ಒಪ್ಪಂದದ ರದ್ಧತಿಯಿಂದಾಗಿ ಸಂಬಂಧಪಟ್ಟ ಎಮ್.ಎಫ್.ಎಫ್ ಗೆ ಯಾವುದೇ ಪರಿಹಾರ ನೀಡತಕ್ಕದ್ದಲ್ಲ.
3. ಅಧಿಕ ವ್ಯಾಪ್ತಿಯ ಪ್ರದೇಶದಲ್ಲಿ ಹುವಿಸಕಂನಿಯು ತನ್ನ ಕಾರ್ಯಚರಣೆಯ ಜವಾಬ್ದಾರಿಯನ್ನು ಹೊರಗಿನ ಏಜೆನ್ಸಿಗೆ ಜವಾಬ್ದಾರಿ ವಹಿಸುವ ಪ್ರಕರಣಗಳಲ್ಲಿ ಒಪ್ಪಂದವನ್ನು ರದ್ದು ಪಡಿಸುವುದು.
4. ಗ್ರಾಹಕರಿಂದ ವಸೂಲಿ ಮಾಡಿದ ಹಣವನ್ನು ನಿಗದಿತ ಸಮಯದೊಳಗೆ ಸಂದಾಯ ಮಾಡದಿದ್ದಲ್ಲಿ ಒಪ್ಪಂದ ರದ್ದು ಪಡಿಸಲಾಗುವುದು.
5. ವಸೂಲಾತಿಯಲ್ಲಿ ಸತತ 3 ತಿಂಗಳು ಪ್ರತಿ ತಿಂಗಳ ಕಂದಾಯ ವಸೂಲಾತಿ ಗುರಿ ಮುಟ್ಟಲು ವಿಫಲವಾದರೆ ಒಪ್ಪಂದ ರದ್ದು ಪಡಿಸಲಾಗುವುದು.
6. ಎಮ್.ಎಫ್.ಎಫ್ ರವರು ಈ ಒಪ್ಪಂದದ ಒಡಂಬಡಿಕೆಯಲ್ಲಿನ ಯಾವುದೇ ಷರತ್ತು ಹಾಗೂ ನಿಬಂಧನೆಗಳನ್ನು ಪಾಲಿಸಲು ಅಥವಾ ಕಾರ್ಯನಿರ್ವಹಿಸಲು ವಿಫಲರಾದರೆ ಒಡಂಬಡಿಕೆಯನ್ನು ರದ್ದುಗೊಳಿಸಲಾಗುವುದು.
7. ದುರ್ನಡತೆ ಮತ್ತು ಲಂಚ/ರುಷುವತ್ತುಗಳಲ್ಲಿ ನಿರತನಾಗಿದ್ದರೆ ಒಡಂಬಡಿಕೆಯನ್ನು ರದ್ದುಗೊಳಿಸಲಾಗುವುದು.
8. ಮೈಕ್ರೋ ಫೀಡರ್ ಫ್ರಾಂಚೈಸಿಯು ಗ್ರಾಹಕರೊಡನೆ ಸೌಜನ್ಯತೆಯಿಂದ ನಡೆದುಕೊಳ್ಳದ ಬಗ್ಗೆ ದೂರುಗಳು ಬಂದರೆ ಒಡಂಬಡಿಕೆಯನ್ನು ರದ್ದುಗೊಳಿಸಲಾಗುವುದು.
9. ಯಾವುದೇ ಕಾರಣದಿಂದಾಗಿ ಎಮ್.ಎಫ್.ಎಫ್ ನೊಂದಿಗೆ ಒಪ್ಪಂದವು ರದ್ದುಗೊಂಡಲ್ಲಿ, ಹುವಿಸಕಂನಿಗೆ ಸಂಬಂಧಿತ ದಾಖಲೆಗಳು, ಭಾಗಶಃ ಉಪಯೋಗಿಸಿದ/ಉಪಯೋಗಿಸಿಲ್ಲದ ರಶೀದಿ ಪುಸ್ತಕಗಳು, ನಮೂನೆಗಳು, ಸ್ಮಾರ್ಟ್ ಬಿಲ್ಲಿಂಗ್ ಮಷೀನ್(ಎಸ್.ಬಿ.ಎಂ)/Optical port cable ಹಾಗೂ ಇತರೆ ದಾಖಲಾತಿಗಳನ್ನು ಹುವಿಸಕಂನಿಗೆ ಹಿಂತಿರುಗಿಸತಕ್ಕದ್ದು.
10. ಒಂದು ವೇಳೆ ಎಮ್.ಎಫ್.ಎಫ್ ರವರು ಕಂಪನಿಗೆ ನಷ್ಟ/ಹಾನಿ ಮಾಡಿದಲ್ಲಿ, ಎಮ್.ಎಫ್.ಎಫ್ ಗಳ ಮೇಲೆ ಕಾನೂನು ರೀತಿಯ ಕ್ರಮ ಕೈಗೊಳ್ಳುವುದಲ್ಲದೇ, ಬ್ಯಾಂಕ್ ಖಾತ್ರಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಹಕ್ಕು ಹೊಂದಿರುತ್ತದೆ.

....7

➢ **ಅರ್ಜಿ ಸಲ್ಲಿಸಲು ಅಭ್ಯರ್ಥಿಗಳಿಗೆ ಸೂಚನೆ:**

**ಆಸಕ್ತ ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆಯೊಂದಿಗೆ ಈ ಕೆಳಗಿನ ದಾಖಲೆ/ವಿವರಗಳನ್ನು ಸಲ್ಲಿಸಬೇಕು.**

1) ಡಿ.ಡಿ ಮೊತ್ತ ರೂ. 250/- + 18% GST ಯನ್ನು Superintending Engineer(Ele.), O & M Circle, HESCOM, HUBLI ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕ್ ನಲ್ಲಿ ತೆಗೆದು ಲಗತ್ತಿಸುವುದು.
2) ಸಂಬಂಧಿಸಿದ ಗ್ರಾಮ ಪಂಚಾಯಿತಿಯಿಂದ ವಾಸಸ್ಥಾನದ ರಹವಾಸಿ ಪ್ರಮಾಣ ಪತ್ರ.
3) ವಿದ್ಯಾರ್ಹತೆಯ ಬಗೆಗೆ ಪ್ರಮಾಣಿತ [ದೃಢೀಕೃತ] ದಸ್ತಾವೇಜುಗಳು.
4) ಭರ್ತಿಯಾದ ಅರ್ಜಿಗಳನ್ನು ಮೇಲಿನ ವಿವರಗಳೊಂದಿಗೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕು. ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ 16-08-2021 ರ ಸಾಯಂಕಾಲ 4.30 ಘಂಟೆಯೊಳಗೆ ಅಭ್ಯರ್ಥಿಯು ಅರ್ಜಿಯನ್ನು ಅಂಚೆ ನೋಂದಣಿ ಸ್ವೀಕೃತಿ ಪೋಸ್ಟ್ ಮುಖಾಂತರ ತಲುಪುವಂತೆ ಸಲ್ಲಿಸಲು ಸೂಚಿಸಲಾಗಿದೆ. (Register Post with ACK)
5) ಕೊನೆಯ ದಿನಾಂಕದ ನಂತರ ಮುಟ್ಟಿದ ಹಾಗೂ ಅಪೂರ್ಣ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
6) 2 ಪಾಸ್ ಪೋರ್ಟ ಅಳತೆಯ ಭಾವ ಚಿತ್ರಗಳು ಹಾಗೂ ಆಧಾರ ಕಾರ್ಡ್/ಪಾನ್ ಕಾರ್ಡ್ (Pan Card).
7) ಜನ್ಮ ದಿನಾಂಕದ ನಿಖರತೆಗಾಗಿ ಎಸ್.ಎಸ್.ಎಲ್.ಸಿ ಪ್ರಮಾಣ ಪತ್ರ/ವರ್ಗಾವಣೆ ಪ್ರಮಾಣ ಪತ್ರ.
8) "ಅರ್ಹ ಅಭ್ಯರ್ಥಿಗಳನ್ನು ದ್ವಿತೀಯ ಪಿ.ಯು.ಸಿ ಅಥವಾ ತತ್ಸಮಾನ ವಿದ್ಯಾರ್ಹತೆ ಮೆರಿಟ್ ಆಧಾರದ ಮೂಲಕ ಆಯ್ಕೆ ಮಾಡಲಾಗುವುದು."
   ಅ) ತತ್ಸಮಾನ ವಿದ್ಯಾರ್ಹತೆ ಕುರಿತು ಸಂಬಂಧಪಟ್ಟ ಪ್ರಾಧಿಕಾರದಿಂದ ದೃಢೀಕರಣ ಪತ್ರ ಅಥವಾ ಸರಕಾರಿ ಆದೇಶದ ಪ್ರತಿಯನ್ನು ಅರ್ಜಿದಾರರು ಸಲ್ಲಿಸತಕ್ಕದ್ದು.
   ಆ)ತತ್ಸಮಾನ ವಿದ್ಯಾರ್ಹತೆಗೆ ಗಳಿಸಿದ ಅಂಕಗಳನ್ನು ಪರಿಗಣಿಸುವ ಕುರಿತು ಸಂಬಂಧಪಟ್ಟ ಪ್ರಾಧಿಕಾರದಿಂದ ದೃಢೀಕರಿಸಿದ ಪತ್ರ ಅಥವಾ ಸರಕಾರಿ ಆದೇಶದ ಪ್ರತಿಯನ್ನು ಅರ್ಜಿದಾರರು ಸಲ್ಲಿಸತಕ್ಕದ್ದು. ಅರ್ಜಿದಾರರು ನೋಟರಿಯವರಿಂದ ದೃಢೀಕರಿಸಿದ ಪ್ರತಿಯನ್ನು ಸಲ್ಲಿಸುವುದು
9) ಅರ್ಹ ಅಭ್ಯಥಿಗಳು ಮೂಲ ದಾಖಲಾತಿಗಳ ಪರಿಶೀಲನೆಗೆ ದಿನಾಂಕ:20-08-2021 ಬೆಳಿಗ್ಗೆ: 10:00 ಘಂಟೆಗೆ ಈ ಕೆಳಗಿನ ವಿಳಾಸಕ್ಕೆ ಹಾಜರಾಗುವುದು.
10) ಅರ್ಜಿಯು **www.hescom.karnataka.gov.in** ವೆಬ್‌ಸೈಟನಲ್ಲಿ ಲಭ್ಯವಿರುತ್ತದೆ.
11) ಅರ್ಜಿ ನಮೂನೆ ಲಗತ್ತಿಸಲಾಗಿದೆ.

➢ **ಅರ್ಜಿ ಸಲ್ಲಿಸುವ ವಿಳಾಸ:**

| | |
|---|---|
| **ಅಧೀಕ್ಷಕ ಅಭಿಯಂತರರು(ವಿ)**<br>**ಕಾರ್ಯ ಮತ್ತು ಪಾಲನೆ, ವೃತ್ತ ಕಛೇರಿ,**<br>**ಶಿವಗಂಗಾ ಲೇ ಔಟ್, ಕೇಶ್ವಾಪೂರ,**<br>**ಹುಬ್ಬಳ್ಳಿ-580023.** | Superintending Engineer,<br>O & M Circle, Hubli,<br>Shivaganga Layout,<br>Keshwapur, Kusugal Road,<br>Hubli-580023. |

29.7.21

**ಅಧೀಕ್ಷಕ ಅಭಿಯಂತರರು(ವಿ)**

**ಕಾ ಮತ್ತು ಪಾ ವೃತ್ತ, ಹೆಸ್ಕಾಂ, ಹುಬ್ಬಳ್ಳಿ.**

**ಪ್ರತಿಗಳು:**

1) ಮುಖ್ಯ ಇಂಜಿನೀಯರ(ವಿ), ಹುಬ್ಬಳ್ಳಿ ವಲಯ, ಶಿವಗಂಗಾ ಲೇಔಟ್, ಕೇಶ್ವಾಪೂರ, ಹುವಿಸಕಂನಿ., ಹುಬ್ಬಳ್ಳಿರವರ ದಯಾಪರ ಮಾಹಿತಿಗಾಗಿ.

....8

2) ಕಾರ್ಯನಿರ್ವಾಹಕ ಇಂಜಿನೀಯರ(ವಿ)ಕಾ ಮತ್ತು ಪಾ ಗ್ರಾಮೀಣ ಹುಬ್ಬಳ್ಳಿ/ಗ್ರಾಮೀಣ ಧಾರವಾಡ/ಗದಗ/ರೋಣ ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
3) ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ) ಕಾ ಮತ್ತು ಪಾ ಗ್ರಾಮೀಣ ಉಪ ವಿಭಾಗ, ಹುಬ್ಬಳ್ಳಿ/ಗ್ರಾಮೀಣ ಉಪ ವಿಭಾಗ, ಧಾರವಾಡ/ಗ್ರಾಮೀಣ ಉಪ ವಿಭಾಗ, ಗದಗ/ಕುಂದಗೋಳ/ನವಲಗುಂದ/ಕಲಘಟಗಿ/ಮುಂಡರಗಿ/ನರಗುಂದ/ರೋಣ/ಲಕ್ಷ್ಮೇಶ್ವರ/ಗಜೇಂದ್ರಗಡ ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
4) ಶಾಖಾಧಿಕಾರಿ, ಹೆಸ್ಕಾಂ, ನೂಲ್ವಿ/ಅಂಚಟಗೇರಿ/ಸಂಶಿ/ಗುಡಗೇರಿ/ಗ್ರಾಮೀಣ ಶಾಖೆ ಕುಂದಗೋಳ/ಮಿಶ್ರೀಕೋಟಿ/ಗ್ರಾಮಿಣ ಶಾಖೆ ಕಲಘಟಗಿ/ಶಿರಹಟ್ಟಿ/ನರೇಗಲ್ ಇವರಿಗೆ ಸೂಕ್ತ ಕ್ರಮಕ್ಕಾಗಿ.

# ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ [ಹೆಸ್ಕಾಂ],

## [“ಮೈಕ್ರೋ ಫೀಡರ್ ಫ್ರಾಂಚೈಸಿ” ಗೊತ್ತು ಮಾಡಿಕೊಳ್ಳುವುದಕ್ಕೆ ಅರ್ಜಿ]

**ಅರ್ಜಿ ಶುಲ್ಕ ರೂ.250+18% GST**

ಇತ್ತೀಚಿನ ಸ್ವಯಂ ದೃಢೀಕೃತ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಲಗತ್ತಿಸುವುದು

1. ಹೆಸರು :______________________
2. ವಿದ್ಯಾರ್ಹತೆ :______________________
   - ಪಿ.ಯು.ಸಿ/ತತ್ಸಮಾನ ವಿದ್ಯಾರ್ಹತೆಯ ಸರಾಸರಿ ಅಂಕಗಳು :______________________
3. ಜನ್ಮ ದಿನಾಂಕ :______________________
4. ವಾಸಸ್ಥಳದ ಪೂರ್ಣ ವಿಳಾಸ :______________________
   :______________________
   :______________________
5. ಅನುಭವ :______________________
6. ಯಾವ ಗ್ರಾಮ ಪಂಚಾಯಿತಿಗೆ ಅರ್ಜಿ ಸಲ್ಲಿಸಲಾಗಿದೆ :______________________
7. ಅರ್ಜಿ ಶುಲ್ಕನ್ನು ಪಾವತಿಸಿದ ವಿವರ :______________________
   - ಬ್ಯಾಂಕ್ ಹೆಸರು :______________________
   - ಡಿ.ಡಿ. ಮೊತ್ತ :______________________
   - ಡಿ.ಡಿ. ಸಂಖ್ಯೆ/ ದಿನಾಂಕ :______________________
8. ಮೊಬೈಲ್ ಸಂಖ್ಯೆ: :______________________
   ಲ್ಯಾಂಡ ಫೋನ್ ಸಂಖ್ಯೆ :______________________
   ಈ–ಮೇಲ್ ಐಡಿ: :______________________

“ಮೇಲೆ ನಮೂದಿಸಿದ ವಿಷಯಗಳು ನನಗೆ ತಿಳಿದ ಮಟ್ಟಿಗೆ ನಿಜವಾಗಿರುತ್ತವೆ ಎಂದು ಪ್ರಮಾಣೀಕರಿಸುತ್ತೇನೆ. ಒಂದು ವೇಳೆ ಮೈಕ್ರೋ ಫೀಡರ್ ಫ್ರಾಂಚೈಸಿಯಾಗಿ ಆಯ್ಕೆಯಾದಲ್ಲಿ ನಾನು ದಿನನಿತ್ಯ ವಸೂಲು ಮಾಡುತ್ತಿರುವ ಕಂದಾಯ ವಸೂಲಾತಿ ಪ್ರಮಾಣ ಆಧರಿಸಿ, ಬ್ಯಾಂಕ್ ಖಾತರಿ ಹಣವನ್ನು ಕನಿಷ್ಠ ರೂ. 50000.00 (ರೂ. ಐವತ್ತು ಸಾವಿರ ಮಾತ್ರ) ಅಥವಾ ಗರಿಷ್ಟ 5 ದಿನಗಳ ತಿಂಗಳಿನ ನಿತ್ಯ ಸರಾಸರಿ ಕಂದಾಯ ವಸೂಲಾತಿ ಪ್ರಮಾಣ, ಇವೆರಡರಲ್ಲಿ ಯಾವುದು ಹೆಚ್ಚಿರುವುದೋ, ಅದಕ್ಕೆ ಸಮನಾಗಿ ಬ್ಯಾಂಕ ಖಾತರಿ ಹಣವನ್ನು ನೀಡಲು ಒಪ್ಪಿರುತ್ತೇನೆ”.

ಸ್ಥಳ :

ಅಭ್ಯರ್ಥಿಯ ಸಹಿ.

ದಿನಾಂಕ :

ಅಭ್ಯರ್ಥಿಯ ಹೆಸರು:______________________

HESCOM

**ಅಭ್ಯರ್ಥಿಗಳಿಗೆ ಸೂಚನೆ :-**

1. ಇದು ಹು.ವಿ.ಸ.ಕಂ.ನಲ್ಲಿ ಉದ್ಯೋಗ/ ನೌಕರಿ/ ಕೆಲಸದ/ ನೇಮಕಾತಿಯ ಅರ್ಜಿ ಅಲ್ಲ. ಅರ್ಜಿಯ ಜೊತೆಗೆ ಗ್ರಾಮ ಪಂಚಾಯಿತಿಯ ಹದ್ದಿನಲ್ಲಿ [ವ್ಯಾಪ್ತಿಯಲ್ಲಿ] ವಾಸವಾದ, ವಯಸ್ಸಿನ, ವಿದ್ಯಾರ್ಹತೆಯ, ಆಧಾರ ಕಾರ್ಡ ಮೂಲ ಪ್ರಮಾಣಿತ ದಸ್ತಾವೇಜುಗಳನ್ನು ಅರ್ಜಿಯ ಜೊತೆಗೆ ಲಗತ್ತಿಸಬಾರದು. ಅರ್ಜಿಯ ಜೊತೆಗೆ ಲಗತ್ತಿಸಿದ **ಮೂಲ ದಸ್ತಾವೇಜುಗಳಿಗೆ ಹು.ವಿ.ಸ.ಕಂಪನಿಯು ಯಾವುದೇ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಿಲ್ಲ.** ಇತ್ತೀಚಿನ ಒಂದು **ಪಾಸ್‌ಪೋರ್ಟ್** ಅಳತೆಯ ಫೋಟೋವನ್ನು ಈ ಅರ್ಜಿಗೆ ಅಂಟಿಸಬೇಕು. ಅಭ್ಯರ್ಥಿಯು ದಿನಾಂಕ: 20.08.2021 ರಂದು ಪರಿಶೀಲನೆಗಾಗಿ ಮೂಲ ಪ್ರತಿಗಳನ್ನು ಹಾಜರುಪಡಿಸಬೇಕು.
2. ಸಂಪೂರ್ಣ ಮಾಹಿತಿಯು ಹು.ವಿ.ಸ.ಕಂಪನಿಯ ವೆಬ್ ಸೈಟ್‌ನಲ್ಲಿ ಲಭ್ಯವಿರುತ್ತದೆ [www.hescom.karnataka.gov.in]

**ಅರ್ಜಿಯೊಂದಿಗೆ ಲಗತ್ತಿಸಬೇಕಾದ ಸ್ವದೃಢೀಕೃತ ಪ್ರಮಾಣ ಪತ್ರಗಳು [ಝೆರಾಕ್ಸ್ ಪ್ರತಿ] : ದಿನಾಂಕ: 20.08.2021 ರಂದು ಮೂಲ ದಾಖಲೆಗಳನ್ನು ಪರಿಶೀಲಿಸಲಾಗುವುದು.**

1. ವಿದ್ಯಾರ್ಹತೆಯ ಬಗ್ಗೆ ಪ್ರಮಾಣ (ದೃಢೀಕೃತ) ದಸ್ತಾವೇಜುಗಳು.
2. ಸಂಬಂಧಿಸಿದ ಗ್ರಾಮ ಪಂಚಾಯಿತಿಯ ವಾಸ ಸ್ಥಾನದ ಪ್ರಮಾಣ ಪತ್ರ.
3. ಜನ್ಮ ದಿನಾಂಕದ ನಿಖರತೆಗಾಗಿ ಎಸ್.ಎಸ್.ಎಲ್.ಸಿ ಪ್ರಮಾಣ ಪತ್ರ/ ವರ್ಗಾವಣೆ ಪ್ರಮಾಣ ಪತ್ರ.
4. ಇತ್ತೀಚಿನ 2 ಪಾಸ್ ಪೋರ್ಟ್ ಅಳತೆಯ ಭಾವ ಚಿತ್ರಗಳು.
5. ಅಭ್ಯರ್ಥಿಯ ಆಧಾರ ಕಾರ್ಡ/ಪಾನ್ ಕಾರ್ಡ.
6. ಭರ್ತಿ ಮಾಡಿದ ನಮೂನೆ.
7. ಡಿ.ಡಿ. ಪ್ರತಿ(Demand Draft)